**ಜೋರಾಗಿರುತ್ತದೆ. ಕನ್ನಡದ ಸ್ಥಿತಿ/ ಪ್ರಾತಿನಿಧ್ಯ ಕೇಂದ್ರದಲ್ಲಿ ಹೇಗಿದೆ?**

ನವದೆಹಲಿಯಲ್ಲಿ ಕರ್ನಾಟಕದ ಪ್ರತಿನಿಧೀಕರಣ ಬಹಳ ದುರ್ಬಲ. ನಮ್ಮ ರಾಜ್ಯದ ಬಹುತೇಕ ರಾಜಕಾರಣಿಗಳಿಗೆ ನವದೆಹಲಿಯಲ್ಲಿ ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಹೇಗೆ ಪ್ರತಿನಿಧಿಸಬೇಕೆಂದೇ ತಿಳಿದಿಲ್ಲ. ರವೀಂದ್ರನಾಥ ಟ್ಯಾಗೋರರ 150ನೇ ಹುಟ್ಟುಹಬ್ಬವನ್ನು ಒಂದು ಜಾಗತಿಕ ಉತ್ಸವವಾಗಿ ಆಚರಿಸಲಾಯಿತು. ಆದರೆ ಇಡೀ ಕರ್ನಾಟಕಕ್ಕೆ ಹೊಸಬಗೆಯ ಚೈತನ್ಯ ನೀಡಿದ ಮಹಾಕವಿ ಕುವೆಂಪು ಅವರ ಶತಮಾನೋತ್ಸವವನ್ನೇ ಒಂದು ರಾಷ್ಟ್ರೀಯ ಉತ್ಸವವನ್ನಾಗಿ ಮಾಡಲು ನಮಗೆ ಶಕ್ತಿ ಸಾಲದಾಯಿತು. ಬೇಂದ್ರೆ, ಮಾಸ್ತಿ, ಅಡಿಗ, ಲಂಕೇಶ್, ಕಾರಂತ, ನರಸಿಂಹ ಸ್ವಾಮಿ ದೇಶಕ್ಕೆ ಗೊತ್ತಿಲ್ಲ. ಕನ್ನಡ ಕ್ಲಾಸಿಕಲ್ ಕೇಂದ್ರವನ್ನು ರಾಜ್ಯ ಸರಕಾರದಡಿಗೆ ತರಲು ನಮಗೆ ಸಾಧ್ಯವಾಗಲೇ ಇಲ್ಲ.

◆ **ಸುಳ್ಯದಲ್ಲಿ ಕಳೆದ ನಿಮ್ಮ ಬಾಲ್ಯದ ಬಗ್ಗೆ ಹೇಳಿ... ಅಲ್ಲಿನ ಜನರ ಒಡನಾಟ, ಸಂಬಂಧಗಳ ಬಗ್ಗೆ...**

ಸುಳ್ಯ ತಾಲೂಕಿನ ಭಾಗವಾಗ ಬಂಟಮಲೆಯ ಬುಡದಲ್ಲಿರುವ ಒಂದು ಪುಟ್ಟ ಪ್ರದೇಶದಲ್ಲಿ ನಾನು ನನ್ನ ಎಳವೆಯನ್ನು ಕಳೆದೆ. ಬಹುಮಟ್ಟಿಗೆ ಆ ಊರು ಈಗಲೂ ಹಾಗೆಯೇ ಇದೆ. ಬಂಟಮಲೆ ಕಾಡಿನ ನಡುವೆ ಇರುವ ಆ ಪ್ರದೇಶದಲ್ಲಿ ಇದ್ದದ್ದು ಒಂದೇ ಮನೆ. ಆ ಮನೆಗೆ ಎರಡೇ ಮಾಡು. ಅಪ್ಪ ಯಕ್ಷಗಾನ, ತಾಳಮದ್ದಳೆ ಮತ್ತಿತರ ಕಾರಣಗಳಿಂದ ಮನೆಯಿಂದ ದೂರವೇ ಇರುತ್ತಿದ್ದರು. ಅಮ್ಮ ಸೊಪ್ಪು ಸೌದೆ ತರಲು ಕಾಡಿನೊಳಕ್ಕೆ ಹೋಗುವಾಗ ನನ್ನನ್ನು ಮನೆಯೊಳಕ್ಕೆ ಇರಲು ಹೇಳಿ ಹೊರಗಿನಿಂದ ಬಾಗಿಲು ಮುಚ್ಚುತ್ತಿದ್ದರು. ಆ ಕತ್ತಲು ಕೋಣೆಯೊಳಗೆ ನಾನು ಏಕಾಂಗಿಯಾಗಿರಲಿಲ್ಲ.

ಏಕೆಂದರೆ ಮನೆಯ ಒಡೆದ ಗೋಡೆಯ ತುಂಬಾ ವಾಸಮಾಡುತ್ತಿದ್ದ ಇಲಿಗಳು ಅಮ್ಮ ಬಾಗಿಲು ಮುಚ್ಚಿದ ತಕ್ಷಣ ಕ್ರಿಯಾಶೀಲವಾಗುತ್ತಿದ್ದವು. ಗೋಡೆಯ ಸಂದುಗೊಂದುಗಳಿಂದ ಸರಕ್ಕನೆ ಇಳಿದು ನೆಲದ ಮೇಲೆ ಓಡಾಡುವ ಚಿಕ್ಕ ದೊಡ್ಡ ಇಲಿಗಳನ್ನು ಕಂಡು ನಾನು ದಿಗಿಲಿನ ಜೊತೆಗೆ ಖುಷಿಗೊಳ್ಳುತ್ತಿದ್ದೆ. ಅವುಗಳನ್ನು ಮುಟ್ಟಲು ಪ್ರಯತ್ನಿಸುತ್ತಿದ್ದೆ. ಅವುಗಳ ಹಿಂದೆ ಓಡುತ್ತಿದ್ದೆ. ಕೈಗೆ ಸಿಗದ ಅವುಗಳ ಚುರುಕುತನಕ್ಕೆ ಅಸೂಯೆ ಪಡುತ್ತಿದ್ದೆ. ಜೊತೆಗೆ ಅನೇಕ ಬಾರಿ ಇಲಿಗಳೊಡನೆ ಮಾತಾಡಲೂ ಪ್ರಯತ್ನಿಸಿದ್ದುಂಟು. ಆದರೆ ಅವು ನನ್ನನ್ನು ಎಂದೂ ಗಂಭೀರವಾಗಿ ಪರಿಗಣಿಸಲೇ ಇಲ್ಲ. ನನಗೆ ಪ್ರಿಯವಾಗಿದ್ದ ಈ ಇಲಿಗಳ ಸಹವಾಸ ಭಯಾನಕವಾಗುತ್ತಿದ್ದುದು ಅವುಗಳನ್ನು ಹಿಡಿಯಲು ಹಾವುಗಳು ಬರುತ್ತಿದ್ದಾಗ. ಹಾವುಗಳಲ್ಲಿ ಕೇರೆ ಹಾವು ಎಂಬ ಪ್ರಭೇದವೊಂದಿದ್ದು ಅವುಗಳಿಗೆ ಇಲಿ ಅಂದರೆ ಪ್ರಾಣ. ಆದರೆ ಮನುಷ್ಯರ ಮಟ್ಟಿಗೆ ನಿರುಪದ್ರವಿ. ಮನೆಯೊಳಗೆ ಕೇರೆ ಹಾವಿನ ಆಗಮನದ ಸೂಚನೆ ದೊರೆತ ತಕ್ಷಣ ಇಲಿಗಳು ಅಡ್ಡಾದಿಡ್ಡಿಯಾಗಿ ಓಡುತ್ತಿದ್ದುವು. ನನಗೂ ಅಪಾಯದ ಅರಿವುಂಟಾಗುತ್ತಿತ್ತು. ಎಷ್ಟು ಸಾಧ್ಯವೋ ಅಷ್ಟು ಮುದುರಿಕೊಳ್ಳುತ್ತಿದ್ದೆ. ಒಮ್ಮೊಮ್ಮೆ ಈ ಕೇರೆ ಹಾವುಗಳು ಆಯತಪ್ಪಿ ಮಾಡಿನಿಂದ ಧೊಪ್ಪನೆ ನೆಲದ ಮೇಲೆ ಬೀಳುತ್ತಿದ್ದುವು. ಬಿದ್ದು ಸ್ವಲ್ಪ ಹೊತ್ತು ಹಾಗೆಯೇ ಸುಮ್ಮನಿರುತ್ತಿದ್ದುವು. ಜಾರಿಬಿದ್ದ ಕಾರಣ ನಾಚಿಕೊಂಡಿತೋ ಎಂಬಂತೆ ಸುಮ್ಮನಿರುತ್ತಿದ್ದ ಕೇರೆ ಹಾವು, ಸ್ವಲ್ಪ ಹೊತ್ತಿನ ಅನಂತರ ಮೆಲ್ಲಗೆ ಹರಿದು, ಗೋಡೆಯ ಬಿರುಕಿನ ಮೂಲಕ ಹೊರಗೆ ಹೋಗುತ್ತಿತ್ತು. ಬಂಟಮಲೆಯಲ್ಲಿ ಕಾಳಿಂಗ ಸರ್ಪ, ನಾಗರ ಹಾವು, ಇರ್ತಲೆ ಹಾವು ಮೊದಲಾದ ಹೆಸರಿನ ಅನೇಕ ಬಗೆಯ ಭಯಾನಕ ವಿಷದ ಹಾವುಗಳಿವೆ. ಆದರೆ ಅವು ಮನೆಯ ಅಂಗಳದವರೆಗೆ ಬರುತ್ತಿದ್ದರೂ ಮನೆಯೊಳಕ್ಕೆ ಬರುತ್ತಿರಲಿಲ್ಲ, ಹಾವು ಕಡಿದು ಸತ್ತವರು ನಮ್ಮೂರಲ್ಲಿ ನನಗೆ ಗೊತ್ತಿದ್ದಂತೆ ಯಾರೂ ಇಲ್ಲ.

ಆ ನಿಗೂಢವಾದ ಬಂಟಮಲೆ ಕಾಡು ನನಗೊಂದು ಕುತೂಹಲ. ಮಳೆಗಾಲದಲ್ಲಿ ಬೀಸುವ ಭಯಾನಕ ಗಾಳಿಗೆ ನಡುರಾತ್ರಿಯಲ್ಲಿ ನೆಲಕ್ಕೊರಗುವ ಮರಗಳ ಸದ್ದಿಗೆ ನಾನು ಬೆಚ್ಚಿ ಬೀಳುತ್ತಿದ್ದೆ. ಹೀಗೆ